ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಸಹಾಯಕ ಕಾರ್ಯಪಾಲಕ ಅಭಿಯಂತರರು ಕಛೇರಿ,
ಉತ್ತರಹಳ್ಳಿ ಉಪವಿಭಾಗ, ಬೆಂಗಳೂರು.

ಸಂ:ಸ.ಕಾ.ಅ(ಉ)/ಪಿಆರ್/ /20-21 ದಿನಾಂಕ:

## ದಿನಾಂಕ:19-12-2020ರಂದು ನಡೆದ 184-ಉತ್ತರಹಳ್ಳಿ ವಾರ್ಡ್ ಸಮಿತಿಯ ಸಭೆಯ ನಡುವಳಿಗಳು

ಮಾನ್ಯ ಆಯುಕ್ತರವರ ಆದೇಶದ ದಿನಾಂಕ:21-09-2020ರ ಮೇರೆಗೆ ವಾರ್ಡ್ ಸಮಿತಿಯನ್ನು ರಚಿಸಲಾಗಿದ್ದು, ದಿನಾಂಕ:19-12-2020ರ ಶನಿವಾರ ಅಪರಾಹ್ನ 12.00 ಘಂಟೆಗೆ ವಾರ್ಡ್ ನಂ:184 ಉತ್ತರಹಳ್ಳಿ, ವಾರ್ಡ್ ಮಟ್ಟದ ಸಮಿತಿಯ ಸಭೆಯನ್ನು ನೋಡಲ್ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆಸಲಾಯಿತು. ಸಭೆಯ ಅಧ್ಯಕ್ಷರಾದ ನೋಡಲ್ ಅಧಿಕಾರಿಗಳು ಸಭೆಯನ್ನು ಪ್ರಾರಂಭಿಸಿ ಉಪಸ್ಥಿತರಿದ್ದ ಎಲ್ಲಾ ಅಧಿಕಾರಿಗಳಿಗೂ ಹಾಗೂ ಸ್ಥಳೀಯ ಸಂಘ ಸಂಸ್ಥೆಯವರಿಗೆ ಸ್ವಾಗತ ಕೋರಿದ್ದು, ಸಭೆಯನ್ನು ಪ್ರಾರಂಭಿಸಿದರು.

**ಸಭೆಗೆ ಹಾಜರಿದ್ದವರು:**

| ಕ್ರಮಸಂಖ್ಯೆ | ಹಾಜರಿದ್ದವರ ಹೆಸರು | ಪದನಾಮ ಅಥವಾ ಇಲಾಖೆ | ಹಾಜರಾತಿ |
|---|---|---|---|
| 1 | ಶ್ರೀಮತಿ ಚೈತ್ರಾ ಹೊನ್ನಾಪುರ | ಅಧ್ಯಕ್ಷರು ವಾಡ್ ನೋಡಲ್ ಅಧಿಕಾರಿ | ಹಾಜರಿದ್ದವರು |
| 2 | ಶ್ರೀ ಎಂ ಜಿ ಕುಮಾರ್ | ಕಾರ್ಯದರ್ಶಿಗಳು | ಹಾಜರಿದ್ದವರು |
| 3 | ಶ್ರೀ ಗಂಗಣ್ಣ | - | ಹಾಜರಿದ್ದವರು |
| 4 | ಶ್ರೀ ವೇಲು | - | ಹಾಜರಿದ್ದವರು |
| 5 | ಶ್ರೀ ಕುಮಾರ್ ಸ್ವಾಮಿ ಎಲ್ | - | ಹಾಜರಿದ್ದವರು |
| 6 | ಶ್ರೀ ಧನಂಜಯ್ ಕುಮಾರ್ | - | ಹಾಜರಿದ್ದವರು |
| 7 | ಶ್ರೀ ಕೃಷ್ಣ ಹೆಚ್.ಹೆಚ್ | - | ಹಾಜರಿದ್ದವರು |
| 8 | ಶ್ರೀ ಪೃಥ್ವೀರಾಜ್ | ಹೆಲ್ತ್ ಡಿಪಾರ್ಟ್‌ಮೆಂಟ್ | ಹಾಜರಿದ್ದವರು |
| 9 | ಶ್ರೀ ರಘು | ಕಾಂಟ್ರಾಕ್ಟರ್ ಶ್ರೀ ನಿತ್ಯ ಎಂಟರ್ ಪ್ರೈಸ್ಸ್ | ಹಾಜರಿದ್ದವರು |
| 10 | ಶ್ರೀ ರವೀಂದ್ರ | ಎ.ಇ.ಬಿ.ಡಬ್ಲ್ಯೂ.ಎಸ್.ಎಸ್.ಬಿ | ಹಾಜರಿದ್ದವರು |
| 11 | ಶ್ರೀ ವೆಂಕಟೇಶ | ಎಸ್.ಡಬ್ಲ್ಯೂ.ಎಂ | ಹಾಜರಿದ್ದವರು |
| 12 | ಶ್ರೀ ಆನಂದಮೂರ್ತಿ | ಪಾಂ.ಸ್ಪ್ರಿಂಗ್‌ಲೇಔಟ್. ಆರ್. ಡಬ್ಲ್ಯೂ .ಎ | ಹಾಜರಿದ್ದವರು |
| 13 | ಶ್ರೀ ಅರುಣ್ | ಎ.ಜಿ.ಎಸ್.ಲೇಔಟ್, ಆರ್.ಡಬ್ಲ್ಯೂ.ಎ | ಹಾಜರಿದ್ದವರು |
| 14 | ಶ್ರೀ ಎಸ್.ಕೆ.ವಿ ಪ್ರಸಾದ್ | ಮಂತ್ರಿ ಟ್ರ್ಯಾಂಕ್‌ವಿಲ್, ಆರ್.ಡಬ್ಲ್ಯೂ.ಎ | ಹಾಜರಿದ್ದವರು |
| 15 | ಶ್ರೀ ಶ್ರೀರಾಮ್ | ಮಂತ್ರಿ ಟ್ರ್ಯಾಂಕ್‌ವಿಲ್, ಆರ್.ಡಬ್ಲ್ಯೂ.ಎ | ಹಾಜರಿದ್ದವರು |

ಕಾರ್ಯದರ್ಶಿ
ವಾರ್ಡ್ ನಂ:184 ಉತ್ತರಹಳ್ಳಿ

Chaitra (signature)
ಅಧ್ಯಕ್ಷರು
ವಾರ್ಡ್ ನಂ:184 ಉತ್ತರಹಳ್ಳಿ

Scanned with CamScanner

| | | | |
|---|---|---|---|
| 16 | ಶ್ರೀ ಸಂತೋಷ್ ಕುಮಾರ್ | ಸಹಾಯಕ ಕಂದಾಯ ಅಧಿಕಾರಿ | ಹಾಜರಿದ್ದವರು |
| 17 | ಶ್ರೀ ನಾರಾಯಣ | ಕಿರಿಯ ಅಭಿಯಂತರರು | ಹಾಜರಿದ್ದವರು |
| 18 | ಶ್ರೀ ರಾಕೇಶ್ | ಸಿ.ಸಿ.ಎಫ್ | ಹಾಜರಿದ್ದವರು |
| 19 | ಶ್ರೀ ನಿಖಿಲ್ | ಆರೋಗ್ಯಾಧಿಕಾರಿ | ಹಾಜರಿದ್ದವರು |

**ಸಭೆಯ ನಡುವಳಿಗಳು:-**

- ಸಭೆಯನ್ನು ಉದ್ದೇಶಿಸಿ ನೋಡಲ್ ಅಧಿಕಾರಿಯವರು ವಿಶೇಷ ಆಯುಕ್ತರು (ಆಡಳಿತ)ರವರ ಸೂಚನೆಯಂತೆ ವಾರ್ಡ್‌ಮಟ್ಟದಲ್ಲಿ ಟ್ರಾಫಿಕ್ ಸಿಗ್ನಲ್‌ಗಳಲ್ಲಿ, ಕೊಳಗೇರಿಗಳಲ್ಲಿ, ಬಸ್ ಮತ್ತು ರೈಲ್ವೇ ನಿಲ್ದಾಣ ಹಾಗೂ ಇತರೆ ಸ್ಥಳಗಳಲ್ಲಿ ಬಿಕ್ಷೆ ಬೇಡುವ, ದದದದದಅನಾಥ ಹಾಗೂ ಶಿಕ್ಷಣ ವಂಚಿತ ಮಕ್ಕಳನ್ನು ಗುರುತಿಸುವಲ್ಲಿ ಸಭೆಯಲ್ಲಿ ಉಪಸ್ಥಿತರಿರುವ ಆರ್.ಡಬ್ಲೂ.ಎ ಹಾಗೂ ಎನ್.ಜಿ.ಓ ಸದಸ್ಯರಲ್ಲಿ ಕೋರಿದ್ದು, ಮಕ್ಕಳನ್ನು ಗುರುತಿಸಿ ವರದಿ ನೀಡಲು ಕೋರಲಾಯಿತು.
- ಸಭೆಯನ್ನು ಉದ್ದೇಶಿಸಿ ನೋಡಲ್ ಅಧಿಕಾರಿಗಳು ಕೋವಿಡ್-19 ಸಾಂಕ್ರಾಮಿಕ ರೋಗ ಹಿನ್ನೆಲೆ ವಾರ್ಡ್ ಮಟ್ಟದಲ್ಲಿ ತೆಗೆದುಕೊಳ್ಳಲಾಗುತ್ತಿರುವ ಕ್ರಮಗಳ ಬಗ್ಗೆ ವಿಚಾರಿಸಿದರು ಸಭೆಯಲ್ಲಿ ಉಪಸ್ಥಿತರಿಂದ ಆರೋಗ್ಯಾಧಿಕಾರಿಗಳು ಕೋವಿಡ್-19, ಟೆಸ್ಟಿಂಗ್ ವಾರ್ಡ್ ಮಟ್ಟದಲ್ಲಿ ಪ್ರತಿದಿನ ನಡೆಸಲಾಗುತ್ತಿದ್ದು, ಒಟ್ಟಾರೆ ವಾರ್ಡ್ ಮಟ್ಟದಲ್ಲಿ ಏಳು ಕೋವಿಡ್ ಟೆಸ್ಟಿಂಗ್ ಕ್ಯಾಂಪ್‌ಗಳನ್ನು ಹಾಕಲಾಗಿದ್ದು, ಒಂದು ಮೊಬೈಲ್ ಕ್ಯಾಂಪ್ ಕಾರ್ಯನಿರ್ವಹಿಸುತ್ತಿದ್ದು ಕೋವಿಡ್ ಟೆಸ್ಟಿಂಗ್ ಪ್ರಕ್ರಿಯೆಯನ್ನು ನಡೆಸಲಾಗುತ್ತಿರುವುದಾಗಿ ಆರೋಗ್ಯಾಧಿಕಾರಿಗಳು ತಿಳಿಸುತ್ತಾರೆ. ಪ್ರತಿದಿನ ಸುಮಾರು 420 ಟೆಸ್ಟಿಂಗ್ ನಡೆಸಲಾಗುತ್ತಿರುವುದಾಗಿ ಸಭೆಯಲ್ಲಿ ತಿಳಿಸಿರುತ್ತಾರೆ. ಸಭೆಯಲ್ಲಿ ಉಪಸ್ಥಿತರಿರುವ ಆರ್.ಡಬ್ಲೂ. ಎ ಸದಸ್ಯರು ಮುಖ್ಯರಸ್ತೆಗಳಲ್ಲಿ ಕ್ಯಾಂಪ್ ಹಾಕಿ ಮಾಸ್ ಮಾರ್ನಿಟರಿಂಗ್ ಮಾಡುವಲ್ಲಿ ಸಮನ್ವಯದ ಮೂಲಕ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲು ಆರೋಗ್ಯಾಧಿಕಾರಿಗಳಿಗೆ ಸೂಚಿಸಲಾಯಿತು. ವಾರ್ಡ್ ಮಟ್ಟದಲ್ಲಿನ ಕಂದಾಯ ಅಧಿಕಾರಿಗಳೊಡನೆ ಸಮನ್ವಯ ಸಾಧಿಸಿ ಟೆಸ್ಟಿಂಗ್ ಮಾಡಿಸಲು ಜನರನ್ನು ಕರೆತರಲು ಸೂಚಿಸಲಾಗಿದ್ದು,
- ವಾರ್ಡ್ ವ್ಯಾಪ್ತಿಯ ಆರೋಗ್ಯ ಅಧಿಕಾರಿಗಳು, ಗುತ್ತಿಗೆದಾರರು ಸೂಪರ್ ವೈಸರ್ ಉಪಸ್ಥಿತರಿದ್ದು, ಘನತ್ಯಾಜ್ಯ ವಿಷಯವಾಗಿ ಬ್ಲಾಕ್ ಸ್ಪಾಟ್‌ಗಳನ್ನು ಪ್ರತಿದಿನ ಪರಿವೀಕ್ಷಿಸಿ, ಅದನ್ನು ನಿರ್ಮೂಲನೆ ಮಾಡುವಲ್ಲಿ ಕ್ರಮವಹಿಸಲು ಸೂಚಿಸಲಾಯಿತು.
- ಹಸಿ ಮತ್ತು ಒಣ ತ್ಯಾಜ್ಯವನ್ನು ಪ್ರತ್ಯೇಕವಾಗಿ ಬೇರ್ಪಡಿಸುವ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸುವಲ್ಲಿ ಆರೋಗ್ಯಾಧಿಕಾರಿಗಳು ಆರ್. ಡಬ್ಲೂ ಎ ಸದಸ್ಯರೊಡನೆ ಸಮಾಲೋಚಿಸಿ ಅರಿವು ಮೂಡಿಸುವ ಕಾರ್ಯಕ್ರಮ ಹಮ್ಮಿಕೊಳ್ಳುವುದಾಗಿ ಸಭೆಯಲ್ಲಿ ಸೂಚಿಸಲಾಯಿತು.
- ವಾರ್ಡ್ ಮಟ್ಟದಲ್ಲಿ ಪ್ರತಿ ಮನೆಯಲ್ಲಿ ಹಸಿ ಮತ್ತು ಒಣ ತ್ಯಾಜ್ಯ ಪ್ರತ್ಯೇಕವಾಗಿ ಸಂಗ್ರಹಣೆ ಆಗುತ್ತಿರುವ ಬಗ್ಗೆ ಹಾಗೂ ಆಟೋ ಟಿಪ್ಪರ್/ತಳ್ಳುವ ಗಾಡಿ ಮನೆಮನೆಗೆ ತಲುಪುತ್ತಿರುವ ಬಗ್ಗೆ ಆರೋಗ್ಯಾಧಿಕಾರಿಗಳು ಹಾಗೂ ಸೂಪರ್ ವೈಸರ್‌ಗಳು ಗಮನಹರಿಸಲು ಕ್ರಮ ತೆಗೆದುಕೊಳ್ಳಲು ನೋಡಲ್ ಅಧಿಕಾರಿಗಳು ಸೂಚಿಸಿದರು.

| | |
|---|---|
| ಕಾರ್ಯದರ್ಶಿ | ಅಧ್ಯಕ್ಷರು |
| ವಾರ್ಡ್ ನಂ:184 ಉತ್ತರಹಳ್ಳಿ | ವಾರ್ಡ್ ನಂ:184 ಉತ್ತರಹಳ್ಳಿ |

Scanned with CamScanner

- ಉತ್ತರಹಳ್ಳಿ ವಾರ್ಡ್ ಬೆಂಗಳೂರು ಒನ್ ಬಳಿ ಸ್ಯಾನಿಟರಿ ಮೋರಿಯಿಂದ ನೀರು ಹೊರಬರುತ್ತಿದ್ದು ರಸ್ತೆಯಲ್ಲಿ ನಿಲ್ಲುತ್ತಿರುವ ಬಗ್ಗೆ ದೂರಿದ್ದು ಹಾಗೂ ಎ.ಜಿ.ಎಸ್ ಲೇಔಟ್ ತಾಜಾ ಬೇಕರಿ ಬಳಿ ಸ್ಯಾನಿಟರಿ ವ್ಯವಸ್ಥೆ ಬಗ್ಗೆ ದೂರಿದ್ದು, ಈ ಸಂಬಂಧ ಬಿ.ಡಬ್ಲ್ಯೂ.ಎಸ್.ಎಸ್.ಬಿ ವಿಭಾಗದವರು ಸಭೆಯಲ್ಲಿ ಉಪಸ್ಥಿತರಿಲ್ಲದ ಕಾರಣ ದೂರವಾಣಿ ಮುಖಾಂತರ ಕ್ರಮವಹಿಸಲು ಸೂಚಿಸಲಾಯಿತು. ಹಾಗೂ ತೆಗೆದುಕೊಂಡ ಕ್ರಮದ ಬಗ್ಗೆ ಮುಂದಿನ ಸಭೆಯಲ್ಲಿ ವರದಿಸಲು ಸೂಚಿಸಲಾಗಿದೆ.
- ವಾರ್ಡ್ ಮಟ್ಟದಲ್ಲಿನ ಒಂಟಿ ಮನೆ ಸಂಬಂಧಿಸಿದ ಫಂಡ್ ಅಲೋಕೆಷನ್ ಸಂಬಂಧ ಡಿಸಿಎಫ್‌ರವರಿಗೆ ಸೂಕ್ತ ವರದಿ ಸಲ್ಲಿಸಲು ಕಾರ್ಯಪಾಲಕ ಅಭಿಯಂತರರಿಗೆ ಸೂಚಿಸಲಾಯಿತು. ಹಾಗೂ ತೆಗೆದುಕೊಂಡ ಕ್ರಮದ ಬಗ್ಗೆ ಮುಂದಿನ ಸಭೆಯಲ್ಲಿ ವರದಿಸಲು ಸೂಚಿಸಲಾಗಿದೆ.
- ಬೆಸ್ಕಾಂ ವಿಭಾಗದವರು ವಾರ್ಡ್ ಮಟ್ಟದಲ್ಲಿ ಕೇಬಲ್‌ಗಳನ್ನು ಅಳವಡಿಸುವ ಸಮಯದಲ್ಲಿ ರಸ್ತೆಗಳನ್ನು ಹಾಳುಮಾಡುತ್ತಿರುವುದಾಗಿ ದೂರಿದ್ದು, ಈ ಸಂಬಂಧ ಸಭೆಯಲ್ಲಿ ಉಪಸ್ಥಿತರಿದ್ದ ಬೆಸ್ಕಾಂ ಅಧಿಕಾರಿಯವರಿಗೆ ರೆಸ್ಟೋರೇಷನ್ ಕಾರ್ಯವನ್ನು ಸರಿಯಾಗಿ ನಿರ್ವಹಿಸುವಲ್ಲಿ ಸೂಚಿಸಲಾಯಿತು. ಹಾಗೂ ತೆಗೆದುಕೊಂಡ ಕ್ರಮದ ಬಗ್ಗೆ ಮುಂದಿನ ಸಭೆಯಲ್ಲಿ ವರದಿಸಲು ಸೂಚಿಸಲಾಗಿದೆ.
- ಸಾಯಿಬಾಬಾ ಮಂದಿರ ರೋಡ್ ಬಳಿ ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರು ಪೈಪ್ ಅಳವಡಿಸುತ್ತಿದ್ದು, ಸದರಿ ಕಾರ್ಯವು ಪೂರ್ಣಗೊಳ್ಳದೇ ರಸ್ತೆ ಹಾಳಾಗುತ್ತಿರುವುದಾಗಿ ರೆಸ್ಟೋರೆಷನ್ ಸಂಬಂಧ ಸೂಕ್ತ ಕ್ರಮವಹಿಸಲು ಸೂಚಿಸಲಾಯಿತು. ಹಾಗೂ ತೆಗೆದುಕೊಂಡ ಕ್ರಮದ ಬಗ್ಗೆ ಮುಂದಿನ ಸಭೆಯಲ್ಲಿ ವರದಿಸಲು ಸೂಚಿಸಲಾಗಿದೆ.
- ಗುಬ್ಬಲಾಲ ಬಳಿ ಡ್ರೈನ್ ಡಿಸಿಲ್ಟಿಂಗ್ ಸಂಬಂಧ ಕ್ರಮವಹಿಸುವುದಾಗಿ ಕಾರ್ಯಪಾಲಕ ಅಭಿಯಂತರರವರಿಗೆ ಸೂಚಿಸಲಾಯಿತು. ಹಾಗೂ ತೆಗೆದುಕೊಂಡ ಕ್ರಮದ ಬಗ್ಗೆ ಮುಂದಿನ ಸಭೆಯಲ್ಲಿ ವರದಿಸಲು ಸೂಚಿಸಲಾಗಿದೆ.
- ಉತ್ತರಹಳ್ಳಿ 2ನೇ ಮೈನ್ ಬಳಿ ವಿದ್ಯುತ್ ಕಂಬ ಅಳವಡಿಕೆ ಬಗ್ಗೆ ಪರಿಶೀಲಿಸಿ ಕ್ರಮವಹಿಸಲು ವಿದ್ಯುತ್ ವಿಭಾಗದವರಿಗೆ ತಿಳಿಸಲಾಯಿತು. ಮುಂದುವರೆದಂತೆ ಜಯನಗರ ಹೌಸಿಂಗ್ ಸೊಸೈಟಿ (ಜೆ.ಸಿ.ಹೆಚ್.ಎಸ್)ಲೇಔಟ್‌ನಲ್ಲಿ ವಿದ್ಯುತ್ ದೀಪಗಳ ಕೊರತೆ ಬಗ್ಗೆ ದೂರುಗಳು ಬಂದಿದ್ದು, ಸದರಿ ಲೇಔಟ್‌ನಲ್ಲಿ ಒಟ್ಟಾರೆ ಎಷ್ಟು ಬೀದಿ ದೀಪಗಳನ್ನು ಹಂಚಿಕೆ ಮಾಡಲಾಗಿದೆ. ಹಾಗೂ ಸದ್ಯ ಎಷ್ಟು ವಿದ್ಯುತ್ ದೀಪಗಳ ಅಳವಡಿಕೆ ಆಗಿರುವ ಬಗ್ಗೆ ಪರಿಶೀಲಿಸಿ ಅಗತ್ಯವಿರುವ ವಿದ್ಯುತ್ ದೀಪಗಳನ್ನು ಪೂರೈಸುವಲ್ಲಿ ಪರಿಶೀಲಿಸಿ ನಿಯಮಾನುಸಾರ ಕ್ರಮವಹಿಸಲು ವಿದ್ಯುತ್ ವಿಭಾಗದವರಿಗೆ ಸೂಚಿಸಲಾಯಿತು. ಹಾಗೂ ತೆಗೆದುಕೊಂಡ ಕ್ರಮದ ಬಗ್ಗೆ ಮುಂದಿನ ಸಭೆಯಲ್ಲಿ ವರದಿಸಲು ಸೂಚಿಸಲಾಗಿದೆ.

| | |
|---|---|
| | (signature) |
| ಕಾರ್ಯದರ್ಶಿ | ಅಧ್ಯಕ್ಷರು |
| ವಾರ್ಡ್ ನಂ:184 ಉತ್ತರಹಳ್ಳಿ | ವಾರ್ಡ್ ನಂ:184 ಉತ್ತರಹಳ್ಳಿ |

Scanned with CamScanner

- ಪ್ಲಾಂ ಸ್ಪ್ರಿಂಗ್ ಬಡಾವಣೆಯಲ್ಲಿ ಬೋರ್‌ವೆಲ್ ಅವಶ್ಯಕತೆ ಬಗ್ಗೆ ಆರ್.ಡಬ್ಲ್ಯೂ.ಎ ರವರು ಕೋರಿದ್ದು ಈ ಬಗ್ಗೆ ಪರಿಶೀಲಿಸಿ ಸೂಕ್ತ ಕ್ರಮ ತೆಗೆದುಕೊಳ್ಳಲು ಸೂಚಿಸಲಾಯಿತು. ಹಾಗೂ ತೆಗೆದುಕೊಂಡ ಕ್ರಮದ ಬಗ್ಗೆ ಮುಂದಿನ ಸಭೆಯಲ್ಲಿ ವರದಿಸಲು ಸೂಚಿಸಲಾಗಿದೆ.
- ಎ.ಜಿ.ಎಸ್.ಲೇಔಟ್‌ನಲ್ಲಿ ಇರುವ ಚರ್ಚ್ ಬಳಿ ದುಷ್ಕರ್ಮಿಗಳು ಕಾನೂನುಬಾಹಿರ ಚಟುವಟಿಕೆಗಳನ್ನು ನಡೆಸುತ್ತಿರುವ ಬಗ್ಗೆ ಸಭೆಯಲ್ಲಿ ಉಪಸ್ಥಿತರಿಂದ ಆರ್.ಡಬ್ಲ್ಯೂ.ಎರವರು ದೂರಿದ್ದು ಈ ಬಗ್ಗೆ ಪರಿಶೀಲಿಸಿ ಕ್ರಮವಹಿಸಲು ಪೋಲೀಸ್ ಇಲಾಖೆಯವರಿಗೆ ದೂರವಾಣಿ ಮುಖಾಂತರ ತಿಳಿಸಲಾಯಿತು. ಹಾಗೂ ತೆಗೆದುಕೊಂಡ ಕ್ರಮದ ಬಗ್ಗೆ ಮುಂದಿನ ಸಭೆಯಲ್ಲಿ ವರದಿಸಲು ಸೂಚಿಸಲಾಗಿದೆ.
- ಗುಬ್ಬಲಾಲ ಮೈನ್ ರೋಡ್‌ಗೆ ಸಂಬಂಧಿಸಿದಂತೆ ಪಾದಚಾರಿ ಮಾರ್ಗಗಳನ್ನು ತಳ್ಳುವ ಗಾಡಿ ಸಣ್ಣ ಅಂಗಡಿಗಳಿಂದ ಒತ್ತುವರಿಗಳು ಕಂಡುಬರುತ್ತಿರುವ ಬಗ್ಗೆ ಆರ್.ಡಬ್ಲ್ಯೂ.ಎರವರು ದೂರಿದ್ದು ಈ ಬಗ್ಗೆ ಪರಿಶೀಲಿಸಿ ಸೂಕ್ತ ಕ್ರಮತೆಗೆದುಕೊಳ್ಳಲು ಅಧಿಕಾರಿಗಳಿಗೆ ಸೂಚಿಸಲಾಯಿತು. ಹಾಗೂ ತೆಗೆದುಕೊಂಡ ಕ್ರಮದ ಬಗ್ಗೆ ಮುಂದಿನ ಸಭೆಯಲ್ಲಿ ವರದಿಸಲು ಸೂಚಿಸಲಾಗಿದೆ.
- ಉತ್ತರಹಳ್ಳಿ ವಾರ್ಡ್ ಮಟ್ಟದಲ್ಲಿ ಲೈಬ್ರರಿ ವ್ಯವಸ್ಥೆ ಇರುವ ಬಗ್ಗೆ ಪ್ರಸ್ಥಾಪಿಸಿದ್ದು ಸದರಿ ಲೈಬ್ರರೀ ಮೇಲ್ವಿಚಾರಣೆ ಹಾಗೂ ನಿರ್ವಹಣೆ ಸಂಬಂಧ ಮುಂದಿನ ಸಭೆಯಲ್ಲಿ ವರದಿ ಸಲ್ಲಿಸಲು ಸೂಚಿಸಲಾಯಿತು.
- ಸಭೆಯಲ್ಲಿ ಉಪಸ್ಥಿತರಿಂದ ಸಹಾಯಕ ಅಭಿಯಂತರರಿಗೆ ವಾರ್ಡ್ ಮಟ್ಟದಲ್ಲಿ ಹಾಲಿ ನಡೆಯುತ್ತಿರುವ/ಕೈಗೊಂಡಿರುವ ವಾರ್ಡ್ ಕಾರ್ಯಗಳನ್ನು ಹಾಗು ಒಟ್ಟಾರೆ ಅನುಮೋದನೆಗೊಂಡಿರುವ ವಾರ್ಡ್ ಕಾರ್ಯಗಳ ಬಗ್ಗೆ ಸಮಗ್ರ ವರದಿಯನ್ನು ಮುಂದಿನ ಸಭೆಯಲ್ಲಿ ನೀಡಲು ಸೂಚಿಸಲಾಯಿತು.

ಸಮಿತಿ ಸಭೆಗೆ ಆಗಮಿಸಿದ ಎಲ್ಲಾ ಅಧಿಕಾರಿಗಳಿಗೂ ಹಾಗೂ ಸಂಘ ಸಂಸ್ಥೆಯ ಸದಸ್ಯರಿಗೂ ನೋಡಲ್ ಅಧಿಕಾರಿಗಳಿಗೂ ವಂದಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

- ಮಾನ್ಯ ಆಯುಕ್ತರ ಸೂಚನೆಯಂತೆ, ವಾರ್ಡ್ ಮಟ್ಟದಲ್ಲಿ ಸಾರ್ವಜನಿಕ ಶೌಚಾಲಯ ಹಾಗೂ ಪಾದಚಾರಿ ಮಾರ್ಗ ವ್ಯವಸ್ಥೆ ಅಗತ್ಯವಿರುವ ಬಗ್ಗೆ ಸಾರ್ವಜನಿಕರಲ್ಲಿ ಅಗತ್ಯತೆಗಳ ವರದಿ ಪಡೆಯಲು ಸೂಚಿಸಿದ್ದು, ಈ ವಿಷಯವಾಗಿ ಅಗತ್ಯತೆ ಪಟ್ಟಿಯನ್ನು ಎಲ್ಲಾ ಸ್ಥಳೀಯ ಸಂಘ ಸಂಸ್ಥೆಯವರಿಗೆ ಪರಿಶೀಲಿಸಿ ಮಂಡಿಸಲು ತಿಳಿಸಲಾಗಿದೆ.

ಕಾರ್ಯದರ್ಶಿ
ವಾರ್ಡ್ ನಂ:184 ಉತ್ತರಹಳ್ಳಿ

ಅಧ್ಯಕ್ಷರು
ವಾರ್ಡ್ ನಂ:184 ಉತ್ತರಹಳ್ಳಿ

Scanned with CamScanner

ಪ್ರತಿಯನ್ನು:-

1. ಮಾನ್ಯ ವಿಶೇಷ ಆಯುಕ್ತರು (ಆಡಳಿತ) ರವರ ಅವಗಾಹನೆಗೆ ಸಲ್ಲಿಸಿದೆ.
2. ಕೌನ್ಸಿಲ್ ಕಾರ್ಯದರ್ಶಿ ರವರ ಅವಗಾಹನೆಗೆ ಸಲ್ಲಿಸಿದೆ.
3. ಮಾನ್ಯ ವಿಶೇಷ ಆಯುಕ್ತರು (ಬೊಮ್ಮನಹಳ್ಳಿ) ರವರ ಅವಗಾಹನೆಗೆ ಸಲ್ಲಿಸಿದೆ.
4. ಜಂಟಿ ಆಯುಕ್ತರು, ಬೊಮ್ಮನಹಳ್ಳಿ ವಲಯರವರ ಅವಗಾಹನೆ ಸಲ್ಲಿಸಿದೆ.
5. ಮುಖ್ಯ ಅಭಿಯಂತರರು, ಬೊಮ್ಮನಹಳ್ಳಿ ವಲಯ ರವರಿಗೆ.
6. ಮುಖ್ಯ ಆರೋಗ್ಯಾಧಿಕಾರಿಗಳು, ಬೊಮ್ಮನಹಳ್ಳಿ ವಲಯ ರವರಿಗೆ.
7. ಸಹಾಯಕ ಕಾರ್ಯಪಾಲಕ ಅಭಿಯಂತರರು (ವಿದ್ಯುತ್) ರವರಿಗೆ ಪರಿಶೀಲಿಸಿ ಸೂಕ್ತ ಕ್ರಮಕ್ಕಾಗಿ
8. ವೈದ್ಯಕೀಯ ಆರೋಗ್ಯಾಧಿಕಾರಿಗಳು ಬೊಮ್ಮನಹಳ್ಳಿ ವಲಯ ರವರಿಗೆ.
9. ಅಧೀಕ್ಷಕ ಅಭಿಯಂತರರು (ಘನತ್ಯಾಜ್ಯ ನಿರ್ವಹಣೆ) ಅವಗಾಹನೆಗೆ ಸಲ್ಲಿಸಿದೆ.
10. ಕಾರ್ಯಪಾಲಕ ಅಭಿಯಂತರರು, ಬೊಮ್ಮನಹಳ್ಳಿ ವಲಯ ರವರಿಗೆ.
11. ಸಹಾಯಕ ಕಾರ್ಯಪಾಲಕ ಅಭಿಯಂತರರು (ಬಿ.ಡಬ್ಲ್ಯೂ.ಎಸ್.ಎಸ್.ಬಿ)
12. ಕಾರ್ಯಪಾಲಕ ಅಭಿಯಂತರರು (ಮೇಜರ್ ರೋಡ್ಸ್)
13. ಆರಕ್ಷಕ ನಿರೀಕ್ಷಕರು (ಸುಬ್ರಹ್ಮಣ್ಯಪುರ ಪೋಲೀಸ್ ಠಾಣೆ-ಬೆಂಗಳೂರು) ರವರಿಗೆ ಸೂಕ್ತ ಕ್ರಮಕ್ಕಾಗಿ
14. ವಾರ್ಡ್ ಸಮಿತಿಯ ಅಧ್ಯಕ್ಷರ ಮಾಹಿತಿಗಾಗಿ
15. ವಾರ್ಡ್ ಸಮಿತಿಯ ಸದಸ್ಯರುಗಳ ಮಾಹಿತಿಗಾಗಿ
16. ಕಛೇರಿ ಪ್ರತಿ.

Scanned with CamScanner